# ಕಾಶ್ಮೀರದಲ್ಲಿನ ಭಯೋತ್ಪಾದನೆಯ ಬಗೆಗಿನ ಅಮೇರಿಕಾದ ವರದಿಯನ್ನು ದುರ್ಲಕ್ಷ್ಯಿಸುವಂತಿಲ್ಲ !

2007 ರಲ್ಲಿ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕ ಘಟನೆಗಳು ಕಡಿಮೆಯಾದವು ಆದರೆ 2007 ರಲ್ಲಿ ದೇಶದ ವಿವಿಧ ಭಾಗಗಳಲ್ಲಾದ ಭಯೋತ್ಪಾದಕರ ದಾಳಿಗಳಲ್ಲಿ ಒಟ್ಟು 2300 ನಾಗರಿಕರು ಪ್ರಾಣ ಕಳೆದುಕೊಂಡರು. ಭಾರತವು ಇತರ ದೇಶಗಳ ತುಲನೆಯಲ್ಲಿ ಈ ವರ್ಷದಲ್ಲಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಭಯೋತ್ಪಾದನೆಗೆ ತುತ್ತಾದ ದೇಶವಾಗಿದೆ. ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕ ಕಾರ್ಯಾಚರಣೆಗಳನ್ನು ಮಾಡುವಂತಹ ಸಂಘಟನೆಗಳು 2007 ರಲ್ಲಿ ತಮ್ಮ ದಿಕ್ಕನ್ನು ಅಫಘಾನಿಸ್ತಾನದೆಡೆಗೆ ಹೊರಳಿಸಿದ್ದವು. ಆದರೆ ಈಗ ಭಾರತದಲ್ಲಿ ತೀವ್ರ ಭಯೋತ್ಪಾದಕ ಹಲ್ಲೆಗಳನ್ನು ಮಾಡಲು ಅವರು ಸಂಚು ಮಾಡುತ್ತಿದ್ದಾರೆ. ಹೀಗಿರುವಾಗ ಭಾರತದಿಂದ ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತೊಗೆಯಲು ಸೂಕ್ತ ಪರಿಹಾರೋಪಾಯಗಳನ್ನು ಮಾಡುವುದು ಕಂಡು ಬರುವುದಿಲ್ಲ ಎಂದು ಅಮೇರಿಕಾ ಸರಕಾರವು ಭಾರತದ ಭಯೋತ್ಪಾನೆಯ ವಿರುದ್ಧದ ಸೌಮ್ಯ ಭೂಮಿಕೆಗೆ ಸಂಬಂಧಿಸಿದಂತೆ ತನ್ನ ವರದಿಯಲ್ಲಿ ಸ್ಪಷ್ಟ ಶಬ್ದಗಳಲ್ಲಿ ನಮೂದಿಸಿದೆ. ಬಹಳಷ್ಟು ವಿಷಯಗಳನ್ನು ಹೇಳುವ ಈ ವರದಿಯೆಡೆಗೆ ನಿರ್ಲಕ್ಷ್ಯಿಸುವುದು ಸಾಧ್ಯವಿಲ್ಲ.

**ಸಂಕಲನಕಾರರು : ಶ್ರೀ. ನಿತ್ಯಾನಂದ ಭಿಸೆ, ಮುಂಬೈ.**

### ಕಾಶ್ಮೀರ ಸಹಿತ ಭಾರತದಾದ್ಯಂತ ತೀವ್ರ ಹಲ್ಲೆಗಳನ್ನು ನಡೆಸುವ ಭಯೋತ್ಪಾದಕರ ದುರುದ್ದೇಶ !

2006 ರಲ್ಲಿ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕ ಹಲ್ಲೆಗಳಲ್ಲಿ ಒಟ್ಟು 2765 ಜನರು ಮೃತ್ಯು ಹೊಂದಿದ್ದರು. 2007 ರಲ್ಲಿ ಇದು 768 ಕ್ಕೆ ಇಳಿಯಿತು. 1990 ರಲ್ಲಿ ಕಾಶ್ಮೀರ ಕಣಿವೆಯಲ್ಲಿ ಮೊದಲಬಾರಿ ವರ್ಷವಿಡೀ ನಡೆದ ಭಯೋತ್ಪಾದನಾ ಕಾರ್ಯಾಚರಣೆಗಳಲ್ಲಿ ಒಟ್ಟು 1177 ಜನರು ಸತ್ತಿದ್ದರು. ಅನಂತರದ ವರ್ಷಗಳಲ್ಲಿ ಈ ಅಂಕಿಯು ಎಂದೂ ಕಡಿಮೆಯಾಗಿರಲಿಲ್ಲ. 2007 ರಲ್ಲಿ ಮಾತ್ರ ಮೊದಲಬಾರಿಗೆ ಈ ಸಂಖ್ಯೆಯು ಸಾವಿರದ ಕೆಳಗೆ ಇಳಿಯಿತು. 2001 ರಲ್ಲಿ ಕಣಿವೆಯಲ್ಲಿನ ಭಯೋತ್ಪಾದಕ ಹಲ್ಲೆಗಳಲ್ಲಿ ಅತ್ಯಂತ ಹೆಚ್ಚು ಅಂದರೆ 4507 ನಾಗರಿಕರು ಬಲಿಯಾಗಿದ್ದರು. ಜಮ್ಮು ಮತ್ತು ಕಾಶ್ಮೀರ ಗಡಿಯಲ್ಲಿನ ಭಯೋತ್ಪಾದನೆಯು 2007 ರಲ್ಲಿ ಕಡಿಮೆಯಾಗಿದ್ದರೂ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕ ಸಂಘಟನೆಗಳು ಉದಾ. ಲಷ್ಕರ್-ಎ-ತೊಯ್ಬಾ ಮತ್ತು ಇತರ ಸಂಘಟನೆಗಳು ಭವಿಷ್ಯದಲ್ಲಿ ಭಾರತದಲ್ಲಿ ಭಯೋತ್ಪಾದಕ ಕಾರ್ಯಾಚರಣೆಗಳನ್ನು ನಡೆಸುವ ಬಗ್ಗೆ ತೀವ್ರ ತಯಾರಿಯನ್ನು ಮಾಡುತ್ತಿದ್ದಾರೆ ಎಂದೂ ಈ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಕಾಶ್ಮೀರದಲ್ಲಿ ಭಯೋತ್ಪಾದಕ ಕಾರ್ಯಾಚರಣೆಗಳನ್ನು ನಡೆಸುವ ಈ ಸಂಘಟನೆಗಳು 2007 ರಲ್ಲಿ ಅಫಘಾನಿಸ್ತಾನದಲ್ಲಿ ಹಲ್ಲೆ ನಡೆಸುವಲ್ಲಿ ಮಗ್ನವಾಗಿದ್ದವು. ಈಗ ಅಲ್-ಕಾಯಿದಾ ಸಂಘಟನೆಯ ಸುದೃಢ ಬೆಂಬಲದಿಂದಾಗಿ ಈ ಸಂಘಟನೆಗಳು ಮತ್ತೊಮ್ಮೆ ಭಾರತದಲ್ಲಿ ತೀವ್ರ ಭಯೋತ್ಪಾದಕ ಹಲ್ಲೆಗಳನ್ನು ನಡೆಸುವ ಸಂಚನ್ನು ಹೆಣೆಯುತ್ತಿವೆ. ಭಾರತ ಮತ್ತು ಪಾಕಿಸ್ತಾನಗಳಲ್ಲಾಗುವ ಭಯೋತ್ಪಾದನೆಯನ್ನು ತಡೆಗಟ್ಟಲು ಪರಸ್ಪರರಿಗೆ ಸಹಾಯ ಮಾಡುವುದಾಗಿ ಈ ದೇಶಗಳು ನಿರ್ಧರಿಸಿದ್ದವು. ಇದರಿಂದ ಪಾಕಿಸ್ತಾನವು ಕಾಶ್ಮೀರದಲ್ಲಿನ ಭಯೋತ್ಪಾದಕ ಸಂಘಟನೆಗಳಿಗೆ ನೀಡುತ್ತಿದ್ದ ಬೆಂಬಲವನ್ನು ಕಡಿತಗೊಳಿಸಿದಾಗ ಅಂದರೆ 2007 ರಲ್ಲಿ ಭಯೋತ್ಪಾದಕರ ಕಾರ್ಯಾಚರಣೆಗಳು ಸರಾಸರಿ ಶೇ. 50 ರಷ್ಟು ಕಡಿಮೆ ಆಯಿತು ಎಂಬ ಮಾಹಿತಿಯು ಎಲ್ಲವನ್ನೂ ಸ್ಪಷ್ಟಪಡಿಸುತ್ತದೆ ಎಂದು ಇದರಲ್ಲಿ ಹೇಳಲಾಗಿದೆ.

### ಭ್ರಷ್ಟಾಚಾರಗ್ರಸ್ತ ನ್ಯಾಯವ್ಯವಸ್ಥೆ ಮತ್ತು ಅಕಾರ್ಯಕ್ಷಮ ಪೊಲೀಸ್ ವ್ಯವಸ್ಥೆಗಳಿಂದಾಗಿ ಭಯೋತ್ಪಾದಕ ಉದ್ದೇಶಗಳು ಪೂರ್ಣವಾಗುವ ಸಾಧ್ಯತೆಗಳು !

ಭಾರತೀಯ ನ್ಯಾಯವ್ಯವಸ್ಥೆಯು ಬಹಳ ಮಂದಗತಿಯದ್ದೂ, ಅಕಾರ್ಯಕ್ಷಮ ಮತ್ತು ಭ್ರಷ್ಟಾಚಾರಗ್ರಸ್ತವಾಗಿದೆ ಎಂಬ ಟಿಪ್ಪಣಿಯನ್ನೂ ಈ ವರದಿಯಲ್ಲಿ ನಮೂದಿಸಲಾಗಿದೆ. ಒಂದು ವರ್ಷದೊಳಗೆ ಭಯೋತ್ಪಾದಕರು ತಮ್ಮ ಎಲ್ಲ ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದು, ಏಕೆಂದರೆ ಭಾರತದಲ್ಲಿನ ಹೆಚ್ಚಿನ ಪ್ರದೇಶಗಳಲ್ಲಿ ಸ್ಥಳೀಯ ಪೊಲೀಸ್ ವ್ಯವಸ್ಥೆಯಲ್ಲಿ ಅಗತ್ಯವಿರುವಷ್ಟು ಮನುಷ್ಯ ಬಲ ಉಪಲಬ್ಧವಿಲ್ಲ. ಈಗ ಇರುವವರಲ್ಲಿಯೂ ತರಬೇತಿಯ ಅಭಾವವಿದ್ದು, ಸಾಧನ ಸಾಮಾಗ್ರಿಗಳ ಕೊರತೆಯೂ ಇದೆಯೆಂದೂ ಈ ವರದಿಯಲ್ಲಿ ಹೇಳಲಾಗಿದೆ. ಹಿಂದೂಗಳಲ್ಲಿ ಮತ್ತು ಮುಸಲ್ಮಾನರಲ್ಲಿ ದಂಗೆಗಳನ್ನು ಎಬ್ಬಿಸುವ ಉದ್ದೇಶದಿಂದ ಫೆಬ್ರವರಿ 2007 ರಲ್ಲಿ 'ಸಮಝೋತಾ ಎಕ್ಸ್‌ಪ್ರೆಸ್'ನ ಮೇಲೆ ಹಲ್ಲೆ ಮಾಡಲಾಗಿತ್ತು. ಅದರ ಬಗ್ಗೆ ಇಂದಿಗೂ ಯಾವುದೇ ಕಾರ್ಯಾಚರಣೆಯಾಗಿಲ್ಲ. ಈ ಹಲ್ಲೆಗೆ ಬಾಂಗ್ಲಾದೇಶ ಮತ್ತು ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ಸಂಘಟನೆಗಳು ಮುಖ್ಯವಾಗಿ ಲಷ್ಕರ್-ಎ-ತೊಯ್ಬಾ, ಜೈಶ್-ಎ-ಮಹಮ್ಮದ್ ಮತ್ತು ಹರಕತ್-ಉಲ್-ಜಿಹಾದ್ ಇಸ್ಲಾಮೀ ಮುಂತಾದ ಭಯೋತ್ಪಾದಕ ಸಂಘಟನೆಗಳೇ ಕಾರಣವಾಗಿದ್ದವು ಎಂದೂ ಈ ವರದಿಯಲ್ಲಿ ನಮೂದಿಸಲಾಗಿದೆ. ಅಮೇರಿಕಾ ಸರಕಾರವು ಕಾಶ್ಮೀರದಲ್ಲಿನ ಭಯೋತ್ಪಾದನೆಯ ಮೇಲೆ ಮಂಡಿಸಿದ ಈ ವರದಿಯು ವಾಸ್ತವಿಕವಾಗಿದೆ. ಆದರೆ ಈ ವರದಿ ಎಂದರೆ ಕಾಶ್ಮೀರ ಸಮಸ್ಯೆಯನ್ನು ನಿರ್ಮಾಣ ಮಾಡಿದ ಅಂದರೆ ಸತತವಾಗಿ ಮುಸಲ್ಮಾನರನ್ನು ಓಲೈಸಿದ, ಪಾಕಿಸ್ತಾನದೆದುರು ಸದಾ ಸ್ನೇಹದ ಸಿಹಿಮಾತುಗಳನ್ನಾಡಿ ಪಾಕ್ ಬೆಂಬಲಿತ ಭಯೋತ್ಪಾದನೆಯ ವಿಷವರ್ತುಲದಲ್ಲಿ ಭಾರತವನ್ನು ಸಿಲುಕಿಸಿದ ರಾಜ್ಯಕರ್ತರ ನಿಷ್ಕ್ರಿಯತೆಯ ಪ್ರತೀಕವಾಗಿದೆ.

### 'ಓಟ್‌ಬ್ಯಾಂಕ್' ಧೋರಣೆಯಿಂದ ಭಯೋತ್ಪಾದನೆಯನ್ನು ಕಿತ್ತೊಗೆಯಲು ಅಸಾಧ್ಯ !

ಕಾಶ್ಮೀರದಲ್ಲಿ ಅಮರನಾಥ ದೇವಸ್ಥಾನಕ್ಕೆ ನೀಡಲಾಗಿದ್ದ 40 ಹೆಕ್ಟೇರ್ ಭೂಮಿಯನ್ನು ಅಲ್ಲಿನ ಸ್ಥಳೀಯ ಮುಸಲ್ಮಾನರ ವಿರೋಧದಿಂದಾಗಿ ಮತ್ತು 'ಪಿಡಿಪಿ' ಎಂಬ ಸ್ಥಳೀಯ ರಾಜಕೀಯ ಪಕ್ಷದ ಬೆದರಿಕೆಯಿಂದಾಗಿ ಆಝಾದ್‌ರ ಸರಕಾರವು ಅದನ್ನು ಪುನಃ ತನ್ನ ವಶಕ್ಕೆ ತೆಗೆದುಕೊಂಡಿತು. ಭೂಮಿಯ ಒಂದು ಸಣ್ಣ ತುಂಡನ್ನು ಸಹ ಹಿಂದೂಗಳಿಗೆ ಹಂಚಲು ಒಪ್ಪದಿರುವ ಕಟ್ಟಾ ಭೂಮಿಕೆಯನ್ನು ತಾಳುವ ಕಾಶ್ಮೀರದಲ್ಲಿನ ಧರ್ಮಾಂಧ ಮತ್ತು ಜಿಹಾದಿ ವೃತ್ತಿಯ ಮುಸಲ್ಮಾನರನ್ನು ಸರಿದಾರಿಗೆ ತರಲು ದುರ್ಬಲರಾದ ರಾಜ್ಯಕರ್ತರಿಗೆ ಎಂದಿಗೂ ಸಾಧ್ಯವಿಲ್ಲ. ಆದುದರಿಂದ ರಾಜ್ಯಕರ್ತರು ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತೊಗೆಯುವರು ಎಂದು ಹೇಳಿದರೆ ಅದು ಮೂರ್ಖತನವಾಗುವುದು. ರಾಜ್ಯಕರ್ತರಿಂದಾಗಿಯೇ ಭಯೋತ್ಪಾದನೆಯು ಕೇವಲ ಕಾಶ್ಮೀರಕ್ಕಷ್ಟೇ ಸೀಮಿತವಾಗಿರದೇ ಅದು ದೇಶದಾದ್ಯಂತ ಹರಡಿತು. ಇಂತಹ ಸ್ಥಿತಿಯಲ್ಲಿ ಕೇವಲ ಕಾಶ್ಮೀರವಷ್ಟೇ ಅಲ್ಲ, ಇಡೀ ದೇಶವನ್ನು ಭಯೋತ್ಪಾದನೆಯಿಂದ ಮುಕ್ತಗೊಳಿಸುವಷ್ಟು ಪ್ರಮಾಣದಲ್ಲಿ ಈ ಸಂಕಟವು ಭೀಕರವಾಗಿದೆ. ಆದುದರಿಂದ ಈ ಕುರಿತು ಚಿಂತಿಸುವುದು ಅನಿವಾರ್ಯವಾಗಿದೆ.

AKSHAYA ENTERPRISES
*Prop. : Sri. Sunder Salian*
Near Taluk Office,
Karkala - 574 104 Ph. : 231811

# ಭಾರತೀಯರೇ, ಶಿಲ್ಲಾಂಗ್‌ದಂತಹ ಸ್ಥಿತಿ ಎಲ್ಲೆಡೆಗಳಲ್ಲಿ ನಿರ್ಮಾಣವಾಗುವ ಮೊದಲೇ ಜಾಗೃತರಾಗಿರಿ !

ಸನಾತನ ಪ್ರಭಾತದ ವಾಚಕರಾದ ಶ್ರೀ. ಸುನೀಲ ಧಾಗೆ ಇವರಿಗೆ ಶಿಲ್ಲಾಂಗ್‌ನಲ್ಲಿ (ಮೇಘಾಲಯ ರಾಜ್ಯದ ರಾಜಧಾನಿ) ಸ್ವಾತಂತ್ರ್ಯ ದಿನಾಚರಣೆಯ ದಿನ ಗಮನಕ್ಕೆ ಬಂದ ಹೃದಯವಿದ್ರಾವಕ ಅನುಭವವನ್ನು ಇಲ್ಲಿ ನೀಡುತ್ತಿದ್ದೇವೆ.

ದೇಶದಾದ್ಯಂತ ಬಹಳ ಸಂಭ್ರಮದಿಂದ ರಾಷ್ಟ್ರೀಯ ಹಬ್ಬಗಳು ಆಚರಿಸಲ್ಪಡುವಾಗ ಈಶಾನ್ಯದಲ್ಲಿನ ರಾಜ್ಯಗಳು ನಕ್ಸಲ್‌ವಾದಿಗಳ ಮತ್ತು ಬಂಡುಕೋರ ಭಯೋತ್ಪಾದಕರ ಭಯದಿಂದಾಗಿ ಬಂದ್ ಪಾಲಿಸಬೇಕಾಗುತ್ತದೆ. 110 ಕೋಟಿ ಜನಸಂಖ್ಯೆಯಿರುವ ಮತ್ತು ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎಂದು ಮೆರೆಯುವ ಭಾರತಕ್ಕೆ ತನ್ನದೇ ಆಂತರಿಕ ರಾಜ್ಯಗಳಲ್ಲಿ ಸ್ವಾತಂತ್ರ್ಯದಿನವನ್ನು ಆಚರಿಸಲಾಗುವುದಿಲ್ಲ ಎಂದರೆ ಇದು ಶೋಚನೀಯ ಸಂಗತಿಯಾಗಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಲು ಕ್ಲಪ್ತ ಸಮಯದಲ್ಲಿಯೇ ಏನೂ ಮಾಡದೇ ಇದ್ದರೆ ನಾಳೆ ಭಾರತದಲ್ಲಿನ ಪ್ರತಿಯೊಂದು ರಾಜ್ಯವು ಈಶಾನ್ಯದಲ್ಲಿನ ರಾಜ್ಯಗಳಂತೆಯೇ ಆಗುವುದು. ಹೀಗಾದರೆ ಆ ಸಮಯದಲ್ಲಿ ನಾವು ಮಾತ್ರ ಸ್ವತಂತ್ರ ಭಾರತದಲ್ಲಿರುವುದಿಲ್ಲ.

### ಸ್ವಾತಂತ್ರ್ಯದಿನದಂದು ಎಲ್ಲವೂ ಬಂದ್ !

ಭಾರತದ ಉತ್ತರ ಮತ್ತು ಪೂರ್ವೋತ್ತರ ಪ್ರದೇಶಗಳನ್ನು ನೋಡಬೇಕೆಂದು ತುಂಬ ಇಚ್ಛೆಯಿತ್ತು. ಇದರಿಂದ ಜಮ್ಮು, ಶ್ರೀನಗರ, ಕಾರ್ಗಿಲ್, ಲಡಾಖ, ಕುಲೂ, ಮನಾಲಿ, ನೈನಿತಾಲ, ಸಿಮ್ಲಾ ದಾರ್ಜಿಲಿಂಗ್, ಸಿಕ್ಕಿಂಗಳನ್ನೆಲ್ಲ ತಿರುಗಾಡಿ ಆಗಸ್ಟ್ 14 ರಂದು ನಾನು ಶಿಲಾಂಗ್ ತಲುಪಿದೆನು. ಮರುದಿನ ಶಿಲಾಂಗ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ ನೋಡಲು ಸಿಗುವುದು ಎಂಬ ಆನಂದದಲ್ಲಿದ್ದೆನು. ಅನಂತರ ನಾವು ಚಿರಾಪುಂಜಿಗೂ ಹೋಗಲಿದ್ದೆವು. ಆದರೆ ಆಗಸ್ಟ್ 15 ರಂದು ಇಲ್ಲಿ ಬಸ್ಸು, ವಾಹನಗಳು, ಶಾಲೆ, ಮಹಾವಿದ್ಯಾಲಯಗಳು, ಅಂಗಡಿಗಳು ಎಲ್ಲವೂ ಬಂದ್ ಇರುತ್ತದೆ ಎಂದು ಅನಂತರ ತಿಳಿದು ಬಂತು. ಇದನ್ನು ಕೇಳಿ ನನಗೆ ಆಶ್ಚರ್ಯದಿಂದ ದಿಗ್ಭ್ರಮೆಯಾಯಿತು. ಸಂಪೂರ್ಣ ಭಾರತದಾದ್ಯಂತ ಶಾಲಾ ಮಹಾವಿದ್ಯಾಲಯಗಳಲ್ಲಿ ಅದೇ ರೀತಿ ಸರಕಾರೀ ಮತ್ತು ಖಾಸಗೀ ಸಂಘ ಸಂಸ್ಥೆಗಳ ಸಹಿತ ಎಲ್ಲರೂ ಆನಂದ ಮತ್ತು ಉತ್ಸಾಹದಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಾರೆ. ಆದರೆ ಇಲ್ಲಿ ಎಲ್ಲವೂ ಬಂದ್.

### ತ್ರಿವರ್ಣ ಧ್ವಜವನ್ನು ಹಾರಿಸದೇ ಸಿಕ್ಕಿಸಲಾಗುತ್ತದೆ !

ಮರುದಿನ ಎಂದರೆ ಆಗಸ್ಟ್ 15 ರಂದು ನಾವು ತಂಗಿದ್ದ ಹೊಟೇಲಿನ ಮಾಲೀಕರು ನಮಗೆ ಎಲ್ಲಿಗೂ ಹೋಗದಿರಿ ಎಂದು ಹೇಳಿದರು. ಆದರೂ ಸ್ವಲ್ಪ ಧೈರ್ಯ ಮಾಡಿ ನಾನು ಸಮೀಪದಲ್ಲಿದ್ದ ಮುಖ್ಯ ಚೌಕಿಗೆ ಹೋದೆ. ಅಲ್ಲಿ ನೋಡಿದರೆ ಎಲ್ಲ ಅಂಗಡಿಗಳೂ ಮುಚ್ಚಿದ್ದವು ಹಾಗೂ ರಸ್ತೆಯು ಸಂಪೂರ್ಣ ನಿರ್ಜನವಾಗಿತ್ತು. ಕೇವಲ ಒಂದು ಕಡೆಯಲ್ಲಿ ಚಹಾ ಮಾರುವವನ ಒಂದು ಟೇಬಲ್ ಮತ್ತು ಅಲ್ಲಿ 4-5 ಮಂದಿ ಇದ್ದರು. ಸುತ್ತಮುತ್ತಲೂ ಒಬ್ಬಿಬ್ಬರು ಪೊಲೀಸರು ಸಂಚರಿಸುತ್ತಿರುವುದು ಕಾಣಿಸಿತು. ಬಸ್ಸು, ಟ್ಯಾಕ್ಸಿ, ಖಾಸಗಿ ವಾಹನಗಳು ಎಲ್ಲವೂ ಬಂದ್. ಎಲ್ಲಿಯೂ ಭಾರತದ ಧ್ವಜವನ್ನು ಹಾರಾಡಿಸಿದ್ದು ಕಾಣಿಸಲಿಲ್ಲ. ಒಂದು ಜಾಗದಲ್ಲಿ ರಸ್ತೆಯ ಬದಿಯಲ್ಲಿ ಬಟ್ಟೆಯ ಫಲಕವನ್ನು ಕಟ್ಟಿದಂತೆ ಭಾರತದ ತ್ರಿವರ್ಣ ಧ್ವಜವನ್ನು ಸಿಕ್ಕಿಸಿರುವುದು ಕಂಡು ಬಂದಿತು (ಹಾರಾಡಿಸಿದ್ದಲ್ಲ). ಎಲ್ಲೆಡೆಗಳಲ್ಲಿ ನಿಶ್ಶಬ್ದವಾಗಿತ್ತು.

ಭಾರತದ ಸ್ವಾತಂತ್ರ್ಯದಿನವನ್ನು ಶಿಲ್ಲಾಂಗ್‌ದಂತಹ ರಾಜಧಾನಿಗಳಲ್ಲಿ ಈ ರೀತಿ ಆಚರಿಸಲಾಗುತ್ತದೆ. ಇದನ್ನು ನೋಡಿ ಬಹಳ ಕೆಟ್ಟದೆನಿಸಿತು. ನಗರದಲ್ಲಿ ಎಲ್ಲಿಯೂ ಉತ್ಸವದ, ಆನಂದದ ವಾತಾವರಣವಿರಲಿಲ್ಲ. ಎಲ್ಲ ಜನರು ತಮ್ಮ ತಮ್ಮ ಮನೆಯಲ್ಲಿ ಸುಮ್ಮನಿದ್ದರು. ಹೆಚ್ಚು ವಿಚಾರಣೆ ಮಾಡಿದಾಗ ಈಶಾನ್ಯದ ರಾಜ್ಯಗಳಲ್ಲಿ ಅರ್ಥಾತ್ ನಾಗಾಲ್ಯಾಂಡ್, ಮಣಿಪುರ, ತ್ರಿಪುರಾ, ಸಿಕ್ಕಿಂ, ಅರುಣಾಚಲ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ಈ ರಾಷ್ಟ್ರೀಯ ಹಬ್ಬಗಳಂದು ಭಯೋತ್ಪಾದಕರ ಹೆದರಿಕೆಯಿಂದಾಗಿ ಇದೇ ರೀತಿಯಲ್ಲಿ ಬಂದ್ ಆಚರಿಸುತ್ತಾರೆ. ಈ ರಾಜ್ಯಗಳು ಭಾರತದಲ್ಲಿಯೇ ಇವೆ ಎಂದು ಇಲ್ಲಿ ಎರಡು ದಿನಗಳಿದ್ದೂ ಅರಿವಾಗಲಿಲ್ಲ.

ಸನಾತನದ ಆಧ್ಯಾತ್ಮಿಕ ಸಂಶೋಧನೆಯ ಮೇಲಾಧಾರಿತ ಸಂಕೇತಸ್ಥಳ SpiritualResearchFoundation.org ಗೆ ಇಂದೇ ಭೇಟಿ ನೀಡಿರಿ !

### ಜನಸಂಖ್ಯೆಯ ನಿಯಂತ್ರಣಕ್ಕಾಗಿ ಸಾಧನೆಯೇ ನಿಜವಾದ ಮಾರ್ಗವಾಗಿದೆ !

ದೇಶದ ಜನಸಂಖ್ಯೆಯ ಹೆಚ್ಚಳದ ಪ್ರಮಾಣವು ಪ್ರತಿವರ್ಷಕ್ಕೆ ಸರಾಸರಿ ಶೇ. 10 ರಷ್ಟು ಇದೆ. ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸಲು ಸಂತತಿ ಪ್ರತಿಬಂಧಕ ಉಪಾಯಗಳನ್ನು ಮಾಡಿಯೂ ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸಲು ಆಗುತ್ತಿಲ್ಲ. ಧಗಧಗಿಸುವ ಯಜ್ಞಕುಂಡದಲ್ಲಿ ತುಪ್ಪದ ಆಹುತಿಯನ್ನು ಹಾಕಿದಾಗ ಜ್ವಾಲೆಗಳು ಹೇಗೆ ಇನ್ನಷ್ಟು ಹೆಚ್ಚಾಗುತ್ತವೆಯೋ ಅದೇ ರೀತಿ ಭೋಗವೂ ಆಗಿದೆ. ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸುವ ನಿಜವಾದ ಮಾರ್ಗವೆಂದರೆ ಕಾಮವಾಸನೆಯ ಮೇಲೆ ಹಿಡಿತ. ಇದಕ್ಕಾಗಿ ಆಧ್ಯಾತ್ಮಿಕ ಸಾಧನೆಯನ್ನೇ ಮಾಡಬೇಕಾಗಿದೆ.

**ಸಮರ್ಥ**

ಸಂಕಲ್ಪನೆ ಮತ್ತು ಚಿತ್ರಾಂಕನ
ಸೌ. ಗೌರಿ ವೈಭವ ಆಫಳೆ, ಸನಾತನ ಆಶ್ರಮ, ಪನವೇಲ




KARNATAKA JEWELLERS
KJ
Dealers in : Gold and Silver Ornaments
Main Road, Karkala - 574 104,
Ph : 230380 (O), 230899 (R).